# ನೆಲಮಂಗಲ ತಾಲ್ಲೂಕಿನ ಪ್ರಾಗೈತಿಹಾಸ

**ಭಾಗ್ಯಲಕ್ಷ್ಮಿ ಪಿ.[1] & ಶ್ವೇತಾರಾಣಿ ಹೆಚ್.[2]**

[1]ಸಂಶೋಧನಾ ವಿದ್ಯಾರ್ಥಿನಿ, ಆದಿಚುಂಚನಗಿರಿ ವಿಶ್ವವಿದ್ಯಾಲಯ, ಬಿ.ಜಿ.ನಗರ, ಮಂಡ್ಯ.

[2]ಸಹ ಪ್ರಾಧ್ಯಾಪಕರು, ಆದಿಚುಂಚನಗಿರಿ ವಿಶ್ವವಿದ್ಯಾಲಯ, ಬಿ.ಜಿ.ನಗರ, ಮಂಡ್ಯ.

**DOI: https://doi.org/10.5281/zenodo.17487098**

## ABSTRACT:

ಪ್ರಸ್ತುತ ಲೇಖನವು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ಪ್ರಾಗೈತಿಹಾಸಿಕ ನೆಲೆಗಳ ಸಮಗ್ರ ಅಧ್ಯಯನವನ್ನು ಪ್ರಸ್ತುತಪಡಿಸುತ್ತದೆ. ಮಾನವನ ನೆಲೆಸುವಿಕೆಯ ಇತಿಹಾಸವನ್ನು ಪ್ರಾಚೀನ ಶಿಲಾಯುಗದಿಂದ ಹಿಡಿದು ಬೃಹತ್ ಶಿಲಾಯುಗದವರೆಗೆ (ಕಬ್ಬಿಣ ಯುಗ) ವಿಂಗಡಿಸಲಾಗಿದೆ. ನೆಲಮಂಗಲವು ಬೃಹತ್ ಶಿಲಾಯುಗದ ಪ್ರಮುಖ ಜನವಸತಿ ಕೇಂದ್ರವಾಗಿತ್ತು ಎಂಬುದಕ್ಕೆ ಹಲವಾರು ಪುರಾತತ್ವ ಸಾಕ್ಷಿಗಳು ದೊರಕಿವೆ. ಮೈಲನಹಳ್ಳಿಯ ಬೂದಿಗುಡ್ಡಗಳು (ನವ ಶಿಲಾಯುಗ), ಬಂಡೆಚಿಕ್ಕನಹಳ್ಳಿ ಮತ್ತು ಶ್ರೀನಿವಾಸಪುರದ ವೃತ್ತಾಕಾರದ ಸಮಾಧಿಗಳು, ಮಾದೀಪುರದ ನಿಲಸುಗಲ್ಲುಗಳು, ಹಾಗೂ ಬಿಲ್ಲನಕೋಟೆ, ಮಹದೇವಪುರ, ಮೈಲನಹಳ್ಳಿಗಳಲ್ಲಿನ ಹಾದಿ ಕೋಣೆ ಗೋರಿಗಳು ಮತ್ತು ರಂಧ್ರ ಕೋಣೆ ಗೋರಿಗಳು ಇಲ್ಲಿನ ಪ್ರಮುಖ ನೆಲೆಗಳಾಗಿವೆ. ಈ ಅವಶೇಷಗಳು ಸುಮಾರು ಎರಡೂವರೆ ಸಾವಿರ ವರ್ಷಗಳಷ್ಟು ಹಿಂದೆಯೇ ಈ ಪ್ರದೇಶದಲ್ಲಿ ಮೃತರ ಸಂಸ್ಕಾರ ಪದ್ಧತಿ, ಸಾಮಾಜಿಕ ರಚನೆ ಮತ್ತು ಕಬ್ಬಿಣದ ಬಳಕೆ ಹೊಂದಿದ್ದ ಪ್ರಗತಿಪರ ಜೀವನವಿತ್ತು ಎಂಬುದನ್ನು ಸ್ಪಷ್ಟಪಡಿಸುತ್ತವೆ.

## KEYWORDS:

ನೆಲಮಂಗಲ, ಪ್ರಾಗೈತಿಹಾಸ, ಬೃಹತ್ ಶಿಲಾಯುಗ, ಬೂದಿಗುಡ್ಡ, ಸಮಾಧಿಗಳು.

**ಪೀಠಿಕೆ:**

ಒಂದು ಪ್ರದೇಶದ ವ್ಯಕ್ತಿ, ವಸ್ತು, ಸ್ಥಳದ ಬಗ್ಗೆ ನಡೆದಿರುವ ಸತ್ಯದ ಕುರುಹುಗಳನ್ನು ನಿರೂಪಿಸುವ ಹಾಗು ವಸ್ತುವಿನ ಸ್ವರೂಪ, ವ್ಯಕ್ತಿಯ ವ್ಯಕ್ತಿತ್ವ, ಸ್ಥಳದ ಮಹತ್ವ ಇದರ ಬಗ್ಗೆ ''ಇದು ಹೀಗೆ ಇತ್ತು'' ಎಂಬುದಾಗಿ ತಿಳಿಸಿಕೊಡುವುದು ಇತಿಹಾಸ. 'Historia' ಎಂಬ ಲ್ಯಾಟಿನ್ ಪದದಿಂದ 'history' ಎಂಬ ಪದ ಬಂದಿದೆ. 'Account', 'record', 'narrative' ಎಂಬ ಅರ್ಥವಿದೆ. ಸಂಸ್ಕೃತದಲ್ಲಿ ಇತಿ+ಹ+ಆಸ ಎಂದರೆ 'ಹೀಗೆ, ನಿಜ, ಆಗಿತ್ತು', ಎಂಬುದಾಗಿದೆ. ಐತಿಹಾಸಿಕ ವಿಷಯ ನಿರೂಪಿಸುವಾಗ ಹಿಂದಿನ ಸ್ಥಿತಿಗತಿಗಳನ್ನು ಉಲ್ಲೇಖಿಸುವ ಪರಿಪಾಠ ಬಂದಿದೆ. ಈ ಲೇಖನದಲ್ಲಿ

ನೆಲಮಂಗಲ ತಾಲ್ಲೂಕಿನ ಪ್ರಾಗೈತಿಹಾಸದ ಅಧ್ಯಯನವನ್ನು ಕೈಗೊಂಡಿದ್ದೇನೆ.

ಒಂದು ಪ್ರದೇಶದಲ್ಲಿ ಮಾನವರು ಸ್ಥಿರವಾಗಿ ನೆಲೆ ನಿಲ್ಲುವುದಕ್ಕಿಂತ ಮುಂಚಿತವಾಗಿಯೇ ಅಲ್ಲಿ ಪ್ರಾಗೈತಿಹಾಸಿಕ ಕಾಲ ಶುರುವಾಗಿತ್ತು. ಪ್ರಾಗೈತಿಹಾಸಿಕ ಕಾಲವೆಂದರೆ ಹಳೆ ಶಿಲಾಯುಗದ ಕಾಲಕ್ಕಿಂತಲೂ ಹಿಂದಿನ ಕಾಲವಾಗಿದೆ. ಈ ಸಮಯದಲ್ಲಿ ಮಾನವರು ಕಲ್ಲು, ಲೋಹದ ಆಯುಧಗಳನ್ನು ಬಳಸಿಕೊಂಡು ಬದುಕನ್ನು ಸಾಗಿಸುತ್ತಿದ್ದರು. ಪ್ರಾಗೈತಿಹಾಸಿಕ ಯುಗವನ್ನು ಆದಿ ಶಿಲಾಯುಗ, ಸೂಕ್ಷ್ಮ ಶಿಲಾಯುಗ, ನವ ಶಿಲಾಯುಗ ಎಂದು ಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ ಎಂದು ಎಂ.ಜಿ.ಮಂಜುನಾಥ ಅವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪ್ರಾಗಿತಿಹಾಸ ಎಂಬ ಲೇಖನದಲ್ಲಿ ಪ್ರಸ್ತಾಪ ಮಾಡಿದ್ದಾರೆ. 5 ಲಕ್ಷ ವರ್ಷದಿಂದ ಕ್ರಿ. ಪೂ. ಹತ್ತು ಸಾವಿರ ವರ್ಷಗಳವರೆಗೆ ಅಸ್ತಿತ್ವದಲ್ಲಿ ಇದ್ದಂತಹ ಕಾಲವನ್ನು ಆದಿ ಶಿಲಾಯುಗ ಅಥವಾ ಪೇಲಿಯೋಲಿಥಿಕ್ ಏಜ್ ಎಂದು ಕರೆದಿದ್ದಾರೆ. ಕ್ರಿ.ಪೂ. ಹತ್ತು ಸಾವಿರ ವರ್ಷದಿಂದ ಕ್ರಿ.ಪೂ. 3000 ವರ್ಷಗಳವರೆಗೆ ಅಸ್ತಿತ್ವದಲ್ಲಿದ್ದ ಕಾಲವನ್ನು ಸೂಕ್ಷ್ಮ ಶಿಲಾಯುಗ ಅಥವಾ ಮೈಕ್ರೋಲಿಥಿಕ್ ಏಜ್ ಎಂದಿದ್ದಾರೆ. ಕ್ರಿ.ಪೂ. 2,500 ವರ್ಷಗಳ ಹಿಂದೆ ಅಸ್ತಿತ್ವದಲ್ಲಿದ್ದ ಕಾಲವನ್ನು ನವ ಶಿಲಾಯುಗ ಅಥವಾ ನಿಯೋಲಿಥಿಕ್ ಏಜ್ ಎಂತಲೂ ಕರೆದಿರುವುದನ್ನು ಎಂ.ಜಿ.ಮಂಜುನಾಥ ಅವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪ್ರಾಗಿತಿಹಾಸ ಎಂಬ ಲೇಖನದಲ್ಲಿ ಪ್ರಸ್ತಾಪಿಸಿದ್ದಾರೆ. ನವ ಶಿಲಾಯುಗದಲ್ಲಿ ಎರಡು ಯುಗಗಳು ಅಸ್ತಿತ್ವದಲ್ಲಿರುವುದನ್ನು ಕಾಣಬಹುದು. ಶಿಲಾ ಆಯುಧಗಳ ಜೊತೆ ತಾಮ್ರದ ಆಯುಧಗಳ ಬಳಕೆ ಹೆಚ್ಚಾಗಿ ಕಂಡುಬಂದ ಕಾರಣದಿಂದ ಶಿಲಾತಾಮ್ರಾಯುಗ ಅಥವಾ ಚಾಕೋಲಿಥಿಕ್ ಏಜ್ ಎಂದು ವಿಭಾಗಿಸಿಕೊಂಡರು. ಕಾಲಾನಂತರದಲ್ಲಿ ಕಬ್ಬಿಣದ ಆವಿಷ್ಕಾರ ಹುಟ್ಟಿಕೊಂಡು ಜನರು ಕಬ್ಬಿಣದ ಆಯುಧಗಳನ್ನು ಬಳಕೆ ಮಾಡುತ್ತಿದ್ದುದರಿಂದ ಈ ಯುಗವು ಬೃಹತ್ ಶಿಲಾಯುಗ ಅಥವಾ ಮೆಗಾಲಿಥಿಕ್ ಏಜ್ ಅಥವಾ ಕಬ್ಬಿಣಯುಗ ಅಥವಾ ಐರನ್ ಏಜ್ ಎಂದು ಕರೆಸಿಕೊಂಡಿತು. ಬೃಹತ್ ಶಿಲಾ ಸಂಸ್ಕೃತಿಯ ಕಬ್ಬಿಣಯುಗವು ಶಿಲಾ ಸಂಸ್ಕೃತಿಯ ಕೊನೆಯ ಹಂತ. ಕಾರಣ ಅಷ್ಟು ಹೊತ್ತಿಗಾಗಲೇ ಲೋಹದ ತಯಾರಿಕೆಯನ್ನು ತಿಳಿದುಕೊಂಡಿರುವ ಮಾನವ ಪೂರ್ಣ ಪ್ರಮಾಣದಲ್ಲಿ ಅದನ್ನು ಉಪಯೋಗಿಸಲು ತೊಡಗಿಸಿಕೊಂಡಿದ್ದ. ಆದಕಾರಣ ಇದು ಕೊನೆಯ ಹಂತವಾಗಿದೆ. ಒಟ್ಟಾರೆಯಾಗಿ ಕರ್ನಾಟಕ ರಾಜ್ಯದಲ್ಲಿ ಇಂತಹ ಅನೇಕ ಬೃಹತ್ ಶಿಲಾಯುಗದ ನೆಲೆಗಳು ಪತ್ತೆಯಾಗಿವೆ. "ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪ್ರಾಗೈತಿಹಾಸದ ಕುರಿತು ಹೇಳುವುದಾದರೆ ಇದು 12,000 ವರ್ಷಗಳಷ್ಟು ಪ್ರಾಚೀನವಾದದ್ದು ಎಂದು ಇತಿಹಾಸ ತಜ್ಞರು ಅಭಿಪ್ರಾಯಪಡುತ್ತಾರೆ."

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕಂಡುಬರುವ ನೆಲಮಂಗಲ

ತಾಲ್ಲೂಕಿನಲ್ಲಿ ಬೃಹತ್ ಶಿಲಾಯುಗಕ್ಕೆ ಸಂಬಂಧಿಸಿದ ಅನೇಕ ಅವಶೇಷಗಳು ಪತ್ತೆಯಾಗಿವೆ. ಈ ನೆಲಮಂಗಲ ತಾಲ್ಲೂಕು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಾಯುವ್ಯ ಭಾಗದಲ್ಲಿದೆ. ಈ ತಾಲ್ಲೂಕಿನಲ್ಲಿ ಶಿವಗಂಗೆ ಪ್ರದೇಶವು ಐತಿಹಾಸಿಕ ತಾಣವಾಗಿದ್ದು, ಜನರನ್ನು ಆಕರ್ಷಿಸುವ ಪ್ರಸಿದ್ಧ ಪ್ರವಾಸಿ ಸ್ಥಳವಾಗಿದೆ. ಐತಿಹಾಸಿಕ ಮಹತ್ವವುಳ್ಳ ಇಂತಹ ಪ್ರದೇಶದಲ್ಲಿ ಪ್ರಾಗೈತಿಹಾಸಿಕ ಕಾಲಕ್ಕೆ ಸಂಬಂಧಿಸಿದ ಅನೇಕ ಕುರುಹುಗಳು ಕೂಡ ಪತ್ತೆಯಾಗಿವೆ. ಲಿಪಿ ಆವಿಷ್ಕಾರಕ್ಕಿಂತಲೂ ಮುಂಚಿತವಾಗಿ ಇಲ್ಲಿ ಜನವಸತಿ ಇತ್ತು ಎಂಬುದಕ್ಕೆ ನಮಗೆ ಸಾಕ್ಷ್ಯಾಧಾರಗಳು ಕೂಡ ದೊರಕಿವೆ. ಮುಖ್ಯವಾಗಿ ಬೃಹತ್ ಶಿಲಾಯುಗಕ್ಕೆ ಸಂಬಂಧಿಸಿದ ನೆಲೆಗಳು ಇತಿಹಾಸ ತಜ್ಞರಿಂದ ಬೆಳಕಿಗೆ ಬಂದಿವೆ. ಅವುಗಳಲ್ಲಿ ಎಲೆಕ್ಯಾತನಹಳ್ಳಿ, ಬಂಡೆಚಿಕ್ಕನಹಳ್ಳಿ, ಮಾಚೋನಾಯಕನಹಳ್ಳಿ, ಬಿಲ್ಲಿನಕೋಟೆ, ಮಹದೇವಪುರ, ಮಹಿಮಾಪುರ, ಮೈಲನಹಳ್ಳಿ, ಶ್ರೀನಿವಾಸಪುರ ಗ್ರಾಮಗಳು ಮುಖ್ಯವಾಗಿವೆ.

ನೆಲಮಂಗಲ ಪ್ರಾಂತ್ಯದ ಬೃಹತ್ ಶಿಲಾಯುಗ ಸಂಸ್ಕೃತಿಯ ಬಗ್ಗೆ ಎಂ ಜಿ ಮಂಜುನಾಥ್, ಜೆ ಟಿ ಜಯರಾಮಯ್ಯ, ಕುಮಾರಿ ಎಸ್ ವೈ ನಿರ್ಮಲ, ಕೆ ಬಿ ಶಿವತಾರಕ್, ಎಚ್ ಎಸ್ ಗೋಪಾಲ್ ರಾವ್ ಹಾಗು ಯುವರಾಜ್ ಇನ್ನು ಅನೇಕ ವಿದ್ವಾಂಸರು ಅಧ್ಯಯನವನ್ನು ನಡೆಸಿದ್ದಾರೆ. ಬೃಹತ್ ಶಿಲಾಯುಗ ಸಂಸ್ಕೃತಿಗೆ ಸಂಬಂಧಪಟ್ಟಂತೆ ಬೂದಿಗುಡ್ಡಗಳು, ನಿಲಸುಗಲ್ಲುಗಳು, ಮಡಕೆಗಳು, ಶಿಲಾವೃತದ ಗೋರಿಗಳು, ರಂಧ್ರಕೋಣೆಯ ಗೋರಿಗಳು, ಕಪ್ಪು–ಕೆಂಪು ಹಾಗು ಕೆಂಪುಬಣ್ಣದ ಮೃತ್ಪಾತ್ರೆಗಳು, ಹಾದಿ ಕೋಣೆಯ ಗೋರಿಗಳು, ಗುಹೆಗಳು, ರೇಖಾಚಿತ್ರಗಳು, ಕಲ್ಮನೆಗಳು, ವೃತ್ತಾಕಾರದ ಸಮಾಧಿಗಳು ಇತ್ಯಾದಿ ಅನೇಕ ಅವಶೇಷಗಳ ನೆಲೆಗಳು ಪತ್ತೆಯಾಗಿವೆ.

ಇತಿಹಾಸ ತಜ್ಞರ ಅಭಿಪ್ರಾಯದಂತೆ ನೆಲಮಂಗಲ ತಾಲ್ಲೂಕಿನ ಮೈಲನಹಳ್ಳಿ ಗ್ರಾಮದಲ್ಲಿ ನವ ಶಿಲಾಯುಗಕ್ಕೆ ಸಂಬಂಧಿಸಿದ ಬೂದಿಗುಡ್ಡಗಳ ನೆಲೆಗಳು ಪತ್ತೆಯಾಗಿವೆ. ಈ ಬೂದಿಗುಡ್ಡಗಳು ಶಿಲಾಯುಗದ ಕಾಲದಲ್ಲಿ ಜನರು ಬದುಕಿದ್ದರು ಎಂಬುದಕ್ಕೆ ಸಾಕ್ಷ್ಯಾಧಾರಗಳು ಆಗಿವೆ. ಶಿಲಾಯುಗದ ಕಾಲದಲ್ಲಿ ಜನರ ಹಿಂದಿನ ಕೆಲಸಗಳ ಕುರಿತಂತೆ ಮಾಹಿತಿ ಕಲೆ ಹಾಕಿದಾಗ ನಮಗೆ ಹಲವಾರು ಪುರಾವೆಗಳು ಕೂಡ ಸಿಗುತ್ತವೆ. ಅದು ಅಶೋಕನ ಕಾಲದವರೆಗೂ ಇದ್ದಂತಹ ಪುರಾವೆಗಳಾದರೂ ಸರಿ. ಆದರೆ ಅಶೋಕನಿಗಿಂತಲೂ ಹಿಂದೆ ಮೂರರಿಂದ ನಾಲ್ಕು ಸಾವಿರ ವರ್ಷಗಳಿಗಿಂತಲೂ ಹಿಂದೆ ಜನರು ಹೇಗೆ ಜೀವಿಸುತ್ತಿದ್ದರು ಎಂಬುದನ್ನು ಅರಿಯಲು ಈ ಬೂದಿಗುಡ್ಡಗಳು ನಮಗೆ ಆಧಾರಗಳಾಗಿವೆ. ನಮ್ಮ ನಾಡಿನ ಹಲವು ಭಾಗಗಳಲ್ಲಿ ಬೂದಿಗುಡ್ಡಗಳ ನೆಲೆಗಳು ಪತ್ತೆಯಾಗಿವೆ. ಹಲವಾರು ನವ ಶಿಲಾಯುಗ ಹಾಗು ಬೃಹತ್ ಶಿಲಾಯುಗಕ್ಕೆ ಸಂಬಂಧಿಸಿದ ಸ್ಥಳಗಳು ಪತ್ತೆಯಾಗಿವೆ. ‘‘ಬೆಂಗಳೂರು

ಗ್ರಾಮಾಂತರ ಜಿಲ್ಲೆಗೆ ಸಂಬಂಧಿಸಿದಂತೆ ಮುಖ್ಯವಾಗಿ ಮಾಗಡಿಯ ವಿರುಪಾಪುರ ಗ್ರಾಮ, ದೇವನಹಳ್ಳಿ ತಾಲ್ಲೂಕಿನ ಬೂದಿಗೆರೆ ಗ್ರಾಮ, ದೊಡ್ಡಬಳ್ಳಾಪುರ ತಾಲ್ಲೂಕಿನ ರಾಜಘಟ್ಟ ಹಾಗು ನೆಲಮಂಗಲ ತಾಲ್ಲೂಕಿನ ಮೈಲನಹಳ್ಳಿಯಲ್ಲಿ ಬೂದಿಗುಡ್ಡೆಗಳು ಪತ್ತೆಯಾಗಿರುವುದನ್ನು ಗಮನಿಸಬಹುದು.” ಆಗಿನ ಕಾಲದಲ್ಲಿ ಈ ಬೂದಿಗುಡ್ಡೆಗಳು ಪಶು ಸಾಕಾಣಿಕೆಯ ಮಹತ್ವವನ್ನು ಸಾರುತ್ತಿದ್ದವು. ಈ ಬೂದಿಗುಡ್ಡೆಗಳು ಹಿಂದಿನ ಕಾಲದ ದನದ ಕೊಟ್ಟಿಗೆಗಳು. ಈ ಜನರಿಗೆ ಬಯಲು ಪ್ರದೇಶದಲ್ಲಿ ಕಟ್ಟಿಹಾಕುವ ದನಕರುಗಳು ಕಾಣಿಸುತ್ತಿದ್ದು, ದನಕರುಗಳ ಸಗಣಿಯನ್ನು ತಿಂಗಳಾನುಗಟ್ಟಲೆ ಕೂಡಿಹಾಕಿ ಒಂದು ಕಡೆ ಗುಡ್ಡೆ ಮಾಡಿ ಸುಡುತ್ತಿದ್ದರು. ಹೀಗೆ ನೂರಾರು ವರ್ಷಗಳ ಕಾಲ ಸುಟ್ಟ ಸಗಣಿಗಳು ಬೂದಿಗುಡ್ಡೆಗಳಾದವು. ಈ ರೀತಿಯ ನವ ಶಿಲಾಯುಗಕ್ಕೆ ಸಂಬಂಧಿಸಿದ ಪ್ರದೇಶಗಳಲ್ಲಿ ನೆಲಮಂಗಲ ತಾಲ್ಲೂಕಿಗೆ ಸಂಬಂಧಿಸಿದ ಮೈಲನಹಳ್ಳಿ ಗ್ರಾಮವು ಕೂಡ ಒಂದಾಗಿದೆ. ಕಾಲಾನಂತರದಲ್ಲಿ ಕಬ್ಬಿಣ ಯುಗದ ಪ್ರಾರಂಭದೊಂದಿಗೆ ಹಳ್ಳಿಗಳು ಬದಲಾಗಿರುವುದನ್ನು ಕಾಣಬಹುದು.

ನೆಲಮಂಗಲ ಪ್ರಾಂತ್ಯದ ಬಂಡೆಚಿಕ್ಕನಹಳ್ಳಿ, ಶ್ರೀನಿವಾಸಪುರ ಈ ಗ್ರಾಮಗಳಲ್ಲಿ ವೃತ್ತಾಕಾರದ ಸಮಾಧಿಗಳು ಇರುವುದನ್ನು ಕಾಣಬಹುದಾಗಿದೆ. ಈ ಸಮಾಧಿಗಳು ಪ್ರಾಚೀನ ಯುಗದಲ್ಲಿ ಹಾಗು ಪೂರ್ವ ಇತಿಹಾಸ ಕಾಲದಲ್ಲಿ ಹೆಚ್ಚಾಗಿ ಕಂಡುಬರುತ್ತಿದ್ದವು. ಮೃತ ವ್ಯಕ್ತಿಯನ್ನು ಹೂಳಿದ ಜಾಗದ ಸುತ್ತಲೂ ಕಲ್ಲುಗಳನ್ನು ನಿಲ್ಲಿಸಿ ಸಮಾಧಿಗಳನ್ನು ನಿರ್ಮಿಸಲಾಗುತ್ತಿತ್ತು. ಮೃತ ವ್ಯಕ್ತಿಗಳ ರಕ್ಷಣೆಯ ಆದ್ಯತೆಗೆ ಸಮಾಧಿ ನಿರ್ಮಾಣಗೊಳ್ಳುತ್ತಿದ್ದವು. ಇದರ ಕಿಂಡಿಗಳು ಪೂರ್ವಾಭಿಮುಖವಾಗಿವೆ. ಕಾರಣ ಪೂರ್ವ ದಿಕ್ಕು ಸೂರ್ಯೋದಯದ ದಿಕ್ಕಾಗಿದೆ. ಹೊಸದಾಗಿ ಪ್ರಾರಂಭವಾಗುವ ಜೀವನ ಅಥವಾ ಪುನರ್ಜನ್ಮಕ್ಕೆ ಸಂಕೇತವೆಂದು ಪುರಾತನ ಜನಾಂಗಗಳು ಭಾವಿಸಿವೆ. ಹೀಗಾಗಿ ಸಮಾಧಿಗಳನ್ನು ಪೂರ್ವಾಭಿಮುಖವಾಗಿ ನಿರ್ಮಿಸಲಾಗಿದೆ. ನಾಲ್ಕು ಅಡಿ ಅಗಲ, $5^{1/2}$ ಅಡಿಯ ಉದ್ದ ಹಾಗು ಮೇಲ್ಭಾಗದ ಚಪ್ಪಡಿ 12 ಅಡಿ ಉದ್ದ, $6^{1/2}$ ಅಡಿ ಅಗಲ ಮತ್ತು ಅರ್ಧ ಅಡಿ ಗಾತ್ರವುಳ್ಳಾಗಿದೆ. 23 ಅಡಿಗಳಷ್ಟು ವೃತ್ತಾಕಾರವಾಗಿರುತ್ತದೆ ಎಂದು ಇತಿಹಾಸ ತಜ್ಞರು ಅಭಿಪ್ರಾಯಪಡುತ್ತಾರೆ. ಒಟ್ಟಾರೆಯಾಗಿ ಹೇಳುವುದಾದರೆ, ಪ್ರಾಚೀನ ಕಾಲದ ಸಮಾಧಿಗಳಾಗಿದ್ದು, ಅಂದಿನ ಸಮಾಜದಲ್ಲಿ ಮೃತರ ಸಂಸ್ಕಾರ ಪದ್ಧತಿ, ವಿಧಿವಿಧಾನ, ಆಚರಣೆಗಳು, ನಂಬಿಕೆಗಳು ಹೇಗಿತ್ತು ಎಂಬುದನ್ನು ಇವು ತಿಳಿಸಿಕೊಡುತ್ತವೆ.

ನೆಲಮಂಗಲ ತಾಲ್ಲೂಕಿನ ಮಾದೀಪುರ ಗ್ರಾಮದಲ್ಲಿ ನಿಲಸುಗಲ್ಲುಗಳು ಸಿಕ್ಕಿರುವುದನ್ನು ಕೆ ಬಿ ಶಿವತಾರಕ್ ಅವರು ಕರ್ನಾಟಕ ಪುರಾತತ್ವ ನೆಲೆಗಳು ಎಂಬ ಗ್ರಂಥದಲ್ಲಿ ತಿಳಿಸಿದ್ದಾರೆ. ನಾಶವಾಗಿರುವ ಶಿಲಾ ಸ್ಮಾರಕಗಳ ಮಾದರಿಯನ್ನು ಅರಿಯಲು ನಿಲಸುಗಲ್ಲುಗಳು ಅಥವಾ ಮೆಗಾಲಿಥಿಕ್ ಮಾನ್ಯುಮೆಂಟ್ಸ್, ಕಿಂಡಿ ಕೋಣೆ

ಗೋರಿಗಳು, ಕಲ್ಲು ಚಪ್ಪಡಿಗಳಿಂದ ನಿರ್ಮಿತವಾದಂತಹ ಸಮಾಧಿಗಳು ಇವೆಲ್ಲವೂ ಸಹಾಯಕವಾಗಿವೆ. ಈ ನಿಲಸುಗಲ್ಲುಗಳ ಬಗ್ಗೆ ಹೇಳುವುದಾದರೆ ಇದು ಒಂದು ಬೃಹತ್ ಶಿಲಾ ಗೋರಿಗಳ ಮಾದರಿಯಾಗಿದೆ. ಒಂದು ನಿರ್ದಿಷ್ಟವಾದಂತಹ ಧಾರ್ಮಿಕ ವಿಧಿ ಎಂದು ಹೇಳುವುದು ಅಸಾಧ್ಯ. ಸ್ವಾಭಾವಿಕವಾಗಿ ಇವು ಒರಟಾಗಿದ್ದು, ಕಲ್ಲು ಚಪ್ಪಡಿಯ ರೂಪದಲ್ಲಿರುತ್ತವೆ. ಇದಕ್ಕೆ ನಿರ್ದಿಷ್ಟವಾದ ಆಕೃತಿ ಎಂಬುದು ಇರುವುದಿಲ್ಲ. ಭೂಮಿಯಲ್ಲಿ ಇವುಗಳು ವಾಲಿಕೊಂಡಿರುವ ರೀತಿಯಲ್ಲಿ ಇರುವುದನ್ನು ಕಾಣಬಹುದಾಗಿದೆ. ಈ ನಿಲಸುಗಲ್ಲುಗಳು ಅತ್ಯಂತ ವಿರಳವಾಗಿ ಕಾಣಿಸಿಕೊಳ್ಳುತ್ತವೆ. ಆಯತಾಕಾರ ಅಥವಾ ಚೌಕಾಕಾರದಲ್ಲಿ ಈ ಕಲ್ಲುಗಳನ್ನು ನಿಲ್ಲಿಸಿರುತ್ತಾರೆ. ಚಿತ್ರದುರ್ಗ, ಹಾಸನ, ಕೋಲಾರ, ಚಿಕ್ಕಮಗಳೂರು, ಶಿವಮೊಗ್ಗ ಹಾಗು ತುಮಕೂರು ಜಿಲ್ಲೆಗಳಲ್ಲಿ ನಿಲಸುಗಲ್ಲುಗಳು ಕಂಡುಬರುತ್ತವೆ. ಇವುಗಳು ಮೃತ ವ್ಯಕ್ತಿಗಳ ಸ್ಮಾರಕವಾಗಿ ನಿಲ್ಲಿಸಿರುತ್ತಾರೆ. ಹಾಗಾಗಿ ನಿಲಸುಗಲ್ಲುಗಳು ಅಂದರೆ ಅದು ಕೊನೆ ಗೋರಿಗಳಾಗಿದ್ದು ಅದರ ಕಿಂಡಿಗಳು ಇರುವುದನ್ನು ಇಲ್ಲಿ ಗಮನಿಸಬಹುದು. ಸಮಾಧಿಗಳ ಸುತ್ತಾ ಶಿಲಾವೃತಗಳನ್ನು ರಚಿಸಿರುವುದನ್ನು ಕಾಣಬಹುದು.

ನೆಲಮಂಗಲ ಪ್ರಾಂತ್ಯದ ಬಿಲ್ಲನಕೋಟೆ, ಮಹದೇವಪುರ, ಮೈಲನಹಳ್ಳಿ ಗ್ರಾಮಗಳಲ್ಲಿ ಹಾದಿ ಕೋಣೆ ಗೋರಿಗಳು ಇರುವುದನ್ನು ಕಾಣಬಹುದಾಗಿದೆ. ಹಾದಿ ಕೋಣೆ ಗೋರಿಗಳು ಬೃಹತ್ ಶಿಲಾ ಗೋರಿಗಳ ಒಂದು ಮಾದರಿಯಾಗಿದೆ. ಇಲ್ಲಿ ಮಡಕೆಗಳು, ಅದರಲ್ಲಿ ರಾಗಿ ಮತ್ತು ಮೂಳೆಗಳು ಪತ್ತೆಯಾಗಿದೆ. ಮಹದೇವಪುರ ಗ್ರಾಮದಲ್ಲಿ ಬೃಹತ್ ಪ್ರಮಾಣದಲ್ಲಿ ಗೋರಿಗಳಿದ್ದು, ಒಂದು ಮುಚ್ಚಳದ ಕಲ್ಲು 20 ಅಡಿ ಉದ್ದ, 15 ಅಡಿ ಅಗಲವಾಗಿ ಕಂಡುಬಂದಿದೆ. ಹಾಗು ಬಿಲ್ಲನಕೋಟೆಯ ಗೋರಿಯಲ್ಲಿ 42 ಹಾದಿ ಕೋಣೆಗಳು ಪತ್ತೆಯಾಗಿದ್ದು, ಮಡಕೆಯ ಭಾಗಗಳು ಕೂಡ ದೊರೆತಿವೆ. ಮೈಲನಹಳ್ಳಿ ಗ್ರಾಮದ ಗೋರಿಯಲ್ಲಿ 109 ರಂಧ್ರ ಕೋಣೆ ಗೋರಿಗಳಿದ್ದು, 12 ಹಾದಿ ಕೋಣೆಯ ಗೋರಿಗಳು ಕೂಡ ದೊರೆತಿವೆ. ಅದರಲ್ಲಿ ನಾಲ್ಕು ಅಗೆಯಲಾಗಿದ್ದು, ಅವುಗಳಲ್ಲಿ ರಾಗಿ ಮತ್ತು ಮೂಳೆಗಳು ಪತ್ತೆ ಆದದ್ದನ್ನು ಗಮನಿಸಬಹುದು.

ನೆಲಮಂಗಲ ಪ್ರಾಂತ್ಯದಲ್ಲಿ ಮಹಿಮಾಪುರ, ಮಹದೇವಪುರ, ಎಲೆಕ್ಯಾತನಹಳ್ಳಿ ಗ್ರಾಮದಲ್ಲಿ ರಂಧ್ರ ಕೋಣೆ ಗೋರಿಗಳು ಪತ್ತೆಯಾಗಿವೆ. ಈ ಸಮಾಧಿಗಳು ಕಲ್ಲು ಚಪ್ಪಡಿ ಇಂದ ನಿರ್ಮಾಣಗೊಂಡಿವೆ. ಇವುಗಳು ನಾಲ್ಕು ಚಪ್ಪಡಿ ಕಲ್ಲಿನಿಂದ ನಿರ್ಮಾಣಗೊಂಡಿದ್ದು, ಮೇಲ್ಭಾಗದಲ್ಲಿ ಒಂದು ಕಲ್ಲು ಇರುತ್ತದೆ. ಕೆಳಭಾಗದಲ್ಲಿ ಕಿಂಡಿ ಇರುತ್ತದೆ. ಸತ್ತ ವ್ಯಕ್ತಿಗೆ ಕಿಂಡಿಯ ಮುಖೇನ ಆಹಾರ ಪೂರೈಸಲಾಗುತ್ತಿತ್ತು ಎಂದು ಪುರಾತತ್ವ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಇದರ ಕಿಂಡಿಯು ಸಹ ಪೂರ್ವಾಭಿಮುಖವಾಗಿದೆ. ಪೂರ್ವ ದಿಕ್ಕು ಸೂರ್ಯನ ಉದಯದ ದಿಕ್ಕು.

ಹೊಸದಾಗಿ ಪ್ರಾರಂಭವಾಗುವ ಜೀವನ ಅಥವಾ ಪುನರ್ಜನ್ಮಕ್ಕೆ ಸಂಕೇತವೆಂದು ಕಿಂಡಿಯನ್ನು ಅವರ ಧಾರ್ಮಿಕ ವಿಧಿಯ ಪ್ರಕಾರ ಪೂರ್ವಾಭಿಮುಖವಾಗಿ ನಿರ್ಮಿಸುತ್ತಿದ್ದರು.

ನೆಲಮಂಗಲ ಪ್ರಾಂತ್ಯದ ಮಹದೇವಪುರ ಗ್ರಾಮದಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ಗೋರಿ ನೆಲೆ ಇದೆ. ಇವುಗಳು ಕೋಣೆ ಗೋರಿಗಳಾಗಿದ್ದು, ಇದರ ಕಿಂಡಿಗಳು ಪೂರ್ವಾಭಿಮುಖವಾಗಿ ಇರುವುದನ್ನು ಗಮನಿಸಬಹುದು. ಈ ಪ್ರಾಂತ್ಯದಲ್ಲಿ ಕಪ್ಪು-ಕೆಂಪು ಹಾಗು ಕೆಂಪುಬಣ್ಣದ ಪಾತ್ರೆಗಳು ದೊರೆತಿವೆ. ಮೃತರ ಅಸ್ಥಿ ಅವಶೇಷಗಳನ್ನು ಗೋಳಾಕಾರದ ಗಡಿಗೆಗಳಲ್ಲಿ ಇಟ್ಟುಕೊಳ್ಳುವ ಪದ್ಧತಿ ಹಿಂದಿನ ಕಾಲದಲ್ಲಿ ಇತ್ತು. ಕಬ್ಬಿಣ ಯುಗದ ಜನರಲ್ಲಿ ಇದು ರೂಢಿಯಲ್ಲಿರುವುದನ್ನು ಕಾಣಬಹುದಾಗಿದೆ.

ಹೀಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ಪ್ರಾಗೈತಿಹಾಸ ಅತ್ಯಂತ ಪ್ರಾಚೀನವಾಗಿದ್ದು, ಇದು ಬೃಹತ್ ಶಿಲಾಯುಗದವರೆಗೂ ಸಹ ಹರಡಿಕೊಂಡಿದೆ. "ಇತಿಹಾಸ ಪೂರ್ವಕಾಲದಲ್ಲಿಯೂ ಸಹ ಪ್ರಮುಖ ಜನವಸತಿಯ ನೆಲೆಯಾಗಿತ್ತು ಎಂದು ಹೇಳಬಹುದಾಗಿದೆ." ನೆಲಮಂಗಲ ಪ್ರಾಂತ್ಯದ ಪ್ರಾಗೈತಿಹಾಸಿಕ ನೆಲೆಗಳೆಂದರೆ ಸೋಂಪುರ ಹೋಬಳಿ ಬಳಿ ಇರುವ ವೀರಸಾಗರ, ಸೋಂಪುರ ಹೋಬಳಿ ಬಳಿ ಇರುವ ಮಹಿಮಾಪುರ, ತ್ಯಾಮಗೊಂಡ್ಲು ಹೋಬಳಿ ಸಮೀಪವಿರುವ ಮದಗ, ಕರೇನಹಳ್ಳಿ, ದೊಡ್ಡಬೆಲೆ ಪ್ರಾಂತ್ಯದಲ್ಲಿ ಗುಹೆಗಳು, ರೇಖಾಚಿತ್ರಗಳು, ಸಮಾಧಿಗಳು ಪತ್ತೆಯಾಗಿವೆ.

ಒಟ್ಟಾರೆಯಾಗಿ ನೆಲಮಂಗಲ ತಾಲ್ಲೂಕಿನಲ್ಲಿ ಶಿಲಾಯುಗ ಕಾಲದ ಇಷ್ಟು ಪ್ರಾಗೈತಿಹಾಸಿಕ ನೆಲೆಗಳು ಕಂಡುಬರುತ್ತವೆ. ಇವುಗಳ ಮೂಲಕ ನಾವು ಈ ತಾಲ್ಲೂಕನ್ನು ಸುಮಾರು ಎರಡೂವರೆ ಸಾವಿರ ವರ್ಷಗಳಷ್ಟು ಹಿಂದಿನಿಂದಲೂ ಇಲ್ಲಿ ಜನವಸತಿ ಇತ್ತು ಎಂಬುದಕ್ಕೆ ಇವೆಲ್ಲಾ ಆಧಾರಗಳು, ಪುರಾವೆಗಳನ್ನು ಗಮನಿಸಿ ಇಷ್ಟೆಲ್ಲಾ ನೆಲೆಗಳನ್ನು ಗುರುತಿಸಬಹುದಾಗಿದೆ. ಬೃಹತ್ ಶಿಲಾಯುಗದಲ್ಲಿ ನೆಲಮಂಗಲ ಪ್ರಾಂತ್ಯದಲ್ಲಿಯೂ ಮಾನವರು ನೆಲೆಸಿದ್ದರು ಎಂಬ ವಿಚಾರವು ಸ್ಪಷ್ಟವಾಗುತ್ತದೆ. ಬೃಹತ್ ಶಿಲಾ ಸಮಾಧಿಗಳನ್ನು ನಿರ್ಮಿಸಿದ ಕಬ್ಬಿಣ ಯುಗದ ಜನರು ಹೆಚ್ಚು ಸತ್ವಶಾಲಿಗಳಾಗಿದ್ದು, ತಮ್ಮ ಜೀವನವನ್ನು ಪ್ರಗತಿಪರವಾಗಿ ರೂಪಿಸಿದ್ದರು. ಸಮಾಜವು ನಾಗರೀಕತೆಯ ದಾರಿಯಲ್ಲಿ ಮುನ್ನಡೆಯುವಂತೆ ಮಾಡುವಲ್ಲಿಯೂ ಕೂಡ ಇವರು ಸಫಲರಾದರು.

## ಪರಾಮರ್ಶನ ಗ್ರಂಥಗಳು:


1. ಗೋಪಾಲ್ ರಾವ್ ಹೆಚ್.ಎಸ್. (1997), ನೆಲದ ಸಿರಿ ನೆನಪಿನ ಸಂಚಿಕೆ: ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕನ್ನಡ ಸಾಹಿತ್ಯ ಪರಿಷತ್ತು, ನೆಲಮಂಗಲ.
2. ಗೋಪಾಲ್ ಬಾ.ರಾ., (2024), ಕರ್ನಾಟಕ ಇತಿಹಾಸ, ಅಭಿನವ ಪ್ರಕಾಶನ, ಬೆಂಗಳೂರು.
3. ಪ್ರದೀಪ್ ಬೆಳಗಲ್ (ಅನು), (2014), ಪೂರ್ವೇತಿಹಾಸ, ಚಿಂತನ ಪುಸ್ತಕ, ಬೆಂಗಳೂರು.
4. ಶ್ರೀಕಂಠಶಾಸ್ತ್ರಿ ಎಸ್. (1975), ಪುರಾತತ್ವ ಶೋಧನೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
5. ಉತ್ಥಾನ, (ಡಿಸೆಂಬರ್ 2024), ಪ್ರೊ॥ ಎಲ್.ಎಸ್. ಶೇಷಗಿರಿರಾವ್ ಜನ್ಮಶತಾಬ್ದ ಸ್ಮರಣೆ, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.